**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.954/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಉಮೇಶ್ ಎಸ್.ಎನ್ | ಪ್ರಾಸಾ-13 |
| ತಂದೆಯ ಹೆಸರು | : ನಾಗರಾಜ್ | ಚಾಸಾ-16 |
| ವಯಸ್ಸು | : 48 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಮಾನೇಜರ್ | ದಿನಾಂಕಃ 04.08.2025 |
| ವಾಸಸ್ಥಳ | : ಕಳಸ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ ಅವರು ನಮ್ಮ ಸಂಸ್ಥೆಯ ಚಾಲಕರು. ಚಾಸಾ-15 ರವರು ನಮ್ಮ ಸಂಸ್ಥೆಯ ಮಾಲೀಕರು.

ಈ ಪ್ರಸ್ತುತ ಪ್ರಕರಣದಲ್ಲಿ ಅಪಘಾತಕ್ಕೀಡಾದ ವಾಹನದ ಬಿಡುಗಡೆಗಾಗಿ ನನಗೆ ಅಧಿಕಾರವನ್ನು ನೀಡಿರುತ್ತಾರೆ. ವಾಹನವು ಎಲ್ಲಿ ಅಪಘಾತಕ್ಕೀಡಾಗಿರುತ್ತದೆ ಎಂಬುದರ ಮಾಹಿತಿ ನನಗಿರುವುದಿಲ್ಲ. ವಾಹನದ ಸಂಖ್ಯೆಯು KA-18-B-1419 ಆಗಿರುತ್ತದೆ.

ಸಾಕ್ಷಿಯು ನಿಪಿ-30 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-30(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು ಕಳೆದ 10 ವರ್ಷಗಳಿಂದ ಅನ್ನಪೂರ್ಣೇಶ್ವರಿ ಟ್ರಾವೆಲ್ಸ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಮ್ಯಾನೇಜರ್ ಆಗಿ ಅನ್ನಪೂರ್ಣೇಶ್ವರಿ ಟ್ರಾವೆಲ್ ನ ಲೆಕ್ಕ ಪುಸ್ತಕವನ್ನು ನಿರ್ವಹಣೆ ಮಾಡಿಕೊಳ್ಳುತ್ತೇನೆ. ಅದನ್ನು ಹೊರತುಪಡಿಸಿ ಇನ್ಯಾವುದೇ ಕೆಲಸವನ್ನು ಮಾಡುವುದಿಲ್ಲ. ನಾನು ಬಸ್ ಗಳ ಚಾಲಕ ಮತ್ತು ನಿರ್ವಾಹಕರನ್ನು ನೇಮಕ ಮಾಡುತ್ತೇನೆ ಎಂದರೆ ಸರಿಯಲ್ಲ. ದಿ.27.05.2023 ರಂದು ಬೆ.11.30 ರ ಸಮಯದಲ್ಲಿ ಮಾವಿನಕೆರೆ ಗ್ರಾಮದ ಕಲ್ಮಕ್ಕಿಯ ಬಳಿ ಅಪಘಾತಕ್ಕೊಳಗಾದ ವಾಹನದ ಸಂಖ್ಯೆ KA-18-B-1419 ರ ಬಸ್ ನ ಚಾಲಕನಾಗಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೇಮಿಸಲಾಗಿತ್ತು ಎಂದರೆ ಸರಿಯಲ್ಲ. ಆ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ಸದರಿ ಬಸ್ ನ್ನು ಚಲಾಯಿಸುತ್ತಿದ್ದ ವಿಷಯ ತಿಳಿದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿಯ ನಿರ್ಲಕ್ಷ್ಯತನ ಮತ್ತು ಅತಿ ವೇಗದಿಂದ ವಾಹನ ಚಲಾಯಿಸಿದ ಪರಿಣಾಮ ಅಪಘಾತ

ಸಂಭವಿಸಿರುವ ವಿಷಯ ನನಗೆ ತಿಳಿದಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ನಮ್ಮ ಸಂಸ್ಥೆಯ ನೌಕರನಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ.ಎ.ಎಮ್ ವಕೀಲರಿಂದಃ</u>**

ನಿಪಿ-30 ಕ್ಕೆ ಸಹಿ ಮಾಡುವ ಸಮಯದಲ್ಲಿ ಅದರಲ್ಲಿ ಯಾವುದೇ ಅಂಶಗಳನ್ನು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ. ಸದರಿ ನಿಶಾನೆಯಲ್ಲಿ ಸಹಿಯನ್ನು ಎಲ್ಲಿ ಮಾಡಲಾಗಿರುತ್ತದೆ ಎಂದು ನೆನಪಿರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.954/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಆಲವಯನ್ ವಾಜ್ | ಪ್ರಾಸಾ-14 |
| ತಂದೆಯ ಹೆಸರು | : ಇಗ್ನೇಷಿಯಾ ವಾಜ್ | ಚಾಸಾ-17 |
| ವಯಸ್ಸು | : 53 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸ್ಥಾಪಕ | ದಿನಾಂಕಃ 04.08.2025 |
| ವಾಸಸ್ಥಳ | : ಬೆಂಗಳೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ನನ್ನ ಪತ್ನಿ. ಚಾಸಾ-6 ನನ್ನ ಮಗ. ಚಾಸಾ-7 ನನ್ನ ಅತ್ತೆ. ಚಾಸಾ-8 ನನ್ನ ಪತ್ನಿಯ ಸ್ನೇಹಿತೆ. ಮೃತನ ಪರಿಚಯ ನನಗಿದೆ, ಅವರು ನನ್ನ ಮಾವ.

ದಿ.27.05.2023 ರಂದು ನಮ್ಮ ಕುಟುಂಬಸ್ಥರು ಕರೆ ಮಾಡಿ ರಸ್ತೆ ಅಪಘಾತದಲ್ಲಿ ನನ್ನ ಮಾವ ಮೃತ ಪಟ್ಟಿರುವ ವಿಷಯವನ್ನು ತಿಳಿಸಿರುತ್ತಾರೆ. ನಂತರ ನಾನು ಬೆಂಗಳೂರಿನಿಂದ ತಕ್ಷಣ ಕಳಸಕ್ಕೆ ಹೊರಟಿರುತ್ತೇನೆ. ಅದೇ ದಿನ ರಾ.9.00 ರ ಸಮಯಕ್ಕೆ ನಾನು ಕಳಸಕ್ಕೆ ತಲುಪಿ, ಪ್ರದೀಪ್ ಎಂಬ ಅಧಿಕಾರಿಯನ್ನು ಸಂಪರ್ಕ ಮಾಡಿರುತ್ತೇನೆ. ನಂತರ ಅವರು ನನ್ನ ಬಳಿ ವಾಹನದ ಆರ್.ಸಿ ಮತ್ತು ಪರವಾನಿಗೆಯನ್ನು ಪಡೆದುಕೊಂಡ ನಂತರ ನನ್ನ ಕುಟುಂಬಸ್ಥರನ್ನು ಕರೆದುಕೊಂಡು ನಾನು ಹಿಂದಿರುಗಿರುತ್ತೇನೆ. ಕಾರು ಮತ್ತು ಬಸ್ ನ ನಡುವೆ ಅಪಘಾತವಾಗಿರುವ ಕುರಿತು ನನಗೆ ಮಾಹಿತಿಯು ತಿಳಿದಿರುತ್ತದೆ. ಸದರಿ ಕಾರ್ ನನಗೆ ಸೇರಿದ್ದಾಗಿರುತ್ತದೆ.

ಸಾಕ್ಷಿಯು ಪೋಲಿಸರ ಕೋರಿಕೆಯ ಮೇರೆಗೆ ನೀಡಿದಂತಹ ತಮ್ಮ ವಾಹನದ ವಿಮೆಯ ಪ್ರತಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು ನಿಪಿ-32 ಮತ್ತು 33 ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿಪಿ-32(ಎ) ಮತ್ತು ನಿಪಿ-33(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ.ಎ.ಎಮ್ ವಕೀಲರಿಂದಃ**

ಮೃತರ ಆರೋಗ್ಯದಲ್ಲಿ ಏರುಪೇರಿದ್ದು ಅವರು ಅನಾರೋಗ್ಯದಿಂದ ಬಳುತ್ತಿದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಿ.27.05.2023 ರಂದು ಮ.12.00 ರ ಸಮಯದಲ್ಲಿ ನನಗೆ ಅಪಘಾತದ ಕುರಿತು ಮಾಹಿತಿ ಬರುತ್ತದೆ. ನನಗೆ ಯಾವುದೇ ಕರೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖಾಧಿಕಾರಿಯನ್ನು ಭೇಟಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳಿಗೆ ಯಾವುದೇ ಆರ್.ಸಿ ಮತ್ತು ಲೈಸನ್ಸ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರೊಟ್ಟಿಗೆ ಶಾಮೀಲಾಗಿ ಹಣ ಪಡೆಯುವ ದುರುದ್ದೇಶದಿಂದ ಸುಳ್ಳು

ದಾಖಲಾತಿಗಳನ್ನು ಸೃಷ್ಟಿಸಿ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.